**KARNATAKA NURSING & PARAMEDICAL SCIENCES EDUCATION (REGULATION) AUTHORITY**
ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ

# PARA MEDICAL BOARD

# 40/20A, Lakshmi Complex, First Floor, Opp. Vani Vilas Hospital, Fort, Bengaluru-560002
**Ph No**: 080-26702159, 26705773 **Email**: pmboffice97@gmail.com / pmbexamination@gmail.com

PMB/02/2022-23 Date: 20.06.2022.

## ಸುತ್ತೋಲೆ

ವಿಷಯ: ದಿನಾಂಕ 20.06.2022ರಂದು ಮಾನ್ಯ ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಭೇಟಿ ನೀಡುತ್ತಿರುವುರಿಂದ ದಿನಾಂಕ 20.02.2022ರಂದು ರಜೆ ಘೋಷಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ:ಇಡಿ 187 ಯುಎನ್ 2022, ದಿನಾಂಕ 18.06.2022

2. ಉಪಪೊಲೀಸ್ ಆಯುಕ್ತರು, ಸಂಚಾರ ಪಶ್ಚಿಮ, ಬೆಂಗಳೂರು ನಗರ ರವರ ಪತ್ರ ಸಂಖ್ಯೆ 52/ಬಿಬಿ/ಡಿಸಿಪಿ/ಸಂ.ಪ/2022, ದಿನಾಂಕ: 18.06.2022.

3. ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ನಿರ್ದೇಶನದ ಮೇರೆಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(2)ರ ದಿನಾಂಕ: 18.06.2022ರ ಉಪ ಪೊಲೀಸ್ ಆಯುಕ್ತರು, ಸಂಚಾರ ಪಶ್ಚಿಮ, ಬೆಂಗಳೂರು ನಗರ ಇವರು ಕೋರಿರುವಂತೆ, ಉಲ್ಲೇಖ(1)ರ ಸರ್ಕಾರ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರ ಆದೇಶದಂತೆ, ಮಾನ್ಯ ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಭೇಟಿ ನೀಡಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ, ಪ್ರಮುಖ ಮಾರ್ಗವಾದ ಐ.ಐ.ಎಸ್.ಸಿ, ಗೊರಗುಂಟೆಪಾಳ್ಯ, ಸಿಎಂಐಟಿ ರಿಂಗ್ ರಸ್ತೆ, ಡಾ|| ರಾಜ್ ಕುಮಾರ್ ಸ್ಮಾರಕ ಮೇಲ್ಸೇತುವೆ, ಲಗ್ಗೆರೆ ಸೇತುವೆ, ನಾಯಂಡಳ್ಳಿ, ಮೈಸೂರು ರಸ್ತೆ, ಆರ್.ವಿ.ಕಾಲೇಜು ಮೂಲಕ ಕೆಂಗೇರಿಯ ಕೊಮ್ಮಘಟ್ಟದಲ್ಲಿ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡು ನಂತರ ಜ್ಞಾನಭಾರತಿಗೆ ಬೇಟಿ ನೀಡಿ, ಅಲ್ಲಿಂದ ವಾಪಾಸ್ ನಾಗರಭಾವಿ, ಸುಮನಹಳ್ಳಿ ಮೇಲ್ಸೇತುವೆ, ಸಿಎಂಟಿಐ, ಗೊರಗುಂಟೆಪಾಳ್ಯ, ಎಂಇಐ ಜಂಕ್ಷನ್, ಗೋವರ್ಧನ್, ಯಶವಂತಪುರ, ಜಕ್ಕೂರು ವಿಮಾನ ನಿಲ್ದಾಣಕ್ಕೆ ತೆರಳಲಿರುವ ಹಿನ್ನಲೆಯಲ್ಲಿ, ಈ ಮಾರ್ಗಗಳಲ್ಲಿ ಸಂಚಾರದ ದಟ್ಟಣೆ ಅಧಿಕವಾಗುವ ಸಾಧ್ಯತೆಯಿರುತ್ತದೆ.

ಆದುದರಿಂದ, ದಿನಾಂಕ: 20.06.2022ರಂದು, ಸರ್ಕಾರದ ಆದೇಶದಂತೆ ಈ ಮಾರ್ಗಗಳ ಸುತ್ತಮುತ್ತಲಿನ ಮತ್ತು ಬೆಂಗಳೂರು ನಗರ ವ್ಯಾಪ್ತಿಯ ನರ್ಸಿಂಗ್ ಬೋರ್ಡ್ ಹಾಗೂ ಅರೆ ವೈದ್ಯಕೀಯ ಮಂಡಳಿಯೊಂದಿಗೆ ಸಂಯೋಜನೆಗೊಂಡ ಎಲ್ಲಾ ನರ್ಸಿಂಗ್ ಶಾಲೆಗಳು ಹಾಗೂ ಅರೆ ವೈದ್ಯಕೀಯ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ದಿನಾಂಕ 20.06.2022ರ ನರ್ಸಿಂಗ್ ಪ್ರಾಯೋಗಿಕ ಪರೀಕ್ಷೆಗಳನ್ನು ಮುಂದೂಡಲಾಗಿದೆ ಹಾಗೂ ಮುಂದೂಡಿದ ಪರೀಕ್ಷೆಯ ದಿನಾಂಕವನ್ನು ಮರು ನಿಗದಿ ಪಡಿಸಲಾಗುವುದು.

ವಿಶೇಷಾಧಿಕಾರಿಗಳು

Dr. Ranganath T.S.
Special Officer
Karnataka Nursing & Paramedical Sciences
Education (Regulation) Authority
Bengaluru.